**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಆರ್.ಎ.ಸಂಖ್ಯೆಃ 25/2013 ಜೊತೆಗೆ 34/2013**

ದಿನಾಂಕಃ 15.02.2025

(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ವಾ.ಸಾ. - 1

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಸಂಖ್ಯೆ 3 ರಿಂದ 6 ರವರ ಪರ ಶ್ರೀ. ಎಸ್.ಎನ್ ವಕೀಲರಿಂದಃ**

ಯಶೋಧಮ್ಮ ಮತ್ತು ಶ್ರೀನಿವಾಸ್ ಮೂರ್ತಿ ನಡುವೆ ಯಾವಾಗ ಭಾಗ ಆಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಭಾಗ ಬರವಣಿಗೆ ಮೂಲಕ ಮಾಡಿಕೊಂಡಿರುತ್ತಾರೆ. ಸದರಿ ಭಾಗದ ಬರವಣಿಗೆ ನಾನು ಪಡೆದುಕೊಂಡಿಲ್ಲ. ಸಾಲ ಕೊಟ್ಟ ಸಂಸ್ಥೆಯವರು ಸದರಿ ಬರವಣಿಗೆ ಅವಶ್ಯಕತೆ ಇಲ್ಲ ಎಂದು ಹೇಳಿದ್ದರಿಂದ ನಾನು ಅದನ್ನು ಪಡೆದುಕೊಂಡಿಲ್ಲ. ಸಾಲ ಕೊಟ್ಟ ಸಂಸ್ಥೆಯವರು ನನಗೆ ಬರವಣಿಗೆಯಲ್ಲಿ ಸದರಿ ಭಾಗದ ಬರವಣಿಗೆ ಅವಶ್ಯಕತೆ ಇಲ್ಲ ಎಂದು ಬರೆದುಕೊಟ್ಟಿಲ್ಲ. ನಾನು ಹೇಳುತ್ತಿರುವಂತೆ ಭಾಗ ಕುರಿತು ಯಾವುದೇ ಬರವಣಿಗೆ ಆಗಿರದ

ಕಾರಣದಿಂದ ನಾನು ಸಾಲ ಕೊಟ್ಟ ಸಂಸ್ಥೆಯವರು ಸದರಿ ಬರವಣಿಗೆ ಅವಶ್ಯಕತೆ ಇಲ್ಲ ಎಂದು ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ನಾನು ಹೇಳುತ್ತಿರುವಂತೆ ಯಾವುದೇ ಭಾಗ ಆಗದ ಕಾರಣ ಯಶೋಧಮ್ಮ ಒಬ್ಬರಿಗೆ ದಾವಾ ಸ್ವತ್ತಿನ ಪೂರ್ವದ ಭಾಗ ಮಾರಾಟ ಮಾಡಲು ಹಕ್ಕು ಇರಲಿಲ್ಲ ಎನ್ನುವುದು ಸರಿ ಅಲ್ಲ. ಯಶೋದಮ್ಮ ದಾವಾ ಸ್ವತ್ತನ್ನು ಕೊಂಡುಕೊಳ್ಳಲು ಆದಾಯ ಮೂಲ ಯಾವುದು ಎಂದು ಕೇಳಿ ತಿಳಿದಿದ್ದೀರ ಎಂದರೆ ಕೇಳುತ್ತಿರುವುದು ಸುಳ್ಳು ಎಂದು ಸಾಕ್ಷಿ ಉತ್ತರಿಸುತ್ತಿದ್ದಾರೆ.

ದಾವಾ ಸ್ವತ್ತು ಕೊಂಡು ಕೊಳ್ಳುವ ಸಮಯಕ್ಕೆ ಯಶೋದಮ್ಮನಿಗೆ ಯಾವುದೇ ದುಡಿಮೆ ಇರಲಿಲ್ಲ. ತಂದೆ ತಾಯಿ ಮನೆಯಿಂದ ಮತ್ತು ಗಂಡನ ದುಡಿಮೆಯಿಂದ ಕೊಂಡಿರುತ್ತಾರೆ. ಈಗ ಹೇಳಿದ ಸಂಗತಿ ದಾವಾ ಸ್ವತ್ತು ಕೊಳ್ಳುವುದಕ್ಕೆ ಮೊದಲು ನನಗೆ ಗೊತ್ತಿರಲಿಲ್ಲ. ದಾವಾ ಸ್ವತ್ತು ಕೊಳ್ಳುವಾಗ ನನಗೆ ಯಶೋದಮ್ಮ ಈ ಕುರಿತು ಹೇಳಿರುತ್ತಾರೆ. ತಂದೆ ತಾಯಿ ಮನೆಯಿಂದ ಮತ್ತು ಗಂಡನ ದುಡಿಮೆಯಿಂದ ದಾವಾ ಸ್ವತ್ತು ಯಶೋದಮ್ಮ ಕೊಂಡಿರುತ್ತಾರೆ ಎಂದು ನನ್ನ ಕ್ರಯ ಪತ್ರದಲ್ಲಿ ತೋರಿಸಿರುತ್ತದೆ ಅಥವಾ ಇಲ್ಲ ಎಂದು ನನಗೆ ನೆನಪಿರುವುದಿಲ್ಲ. ಇದನ್ನು ನನ್ನ ವಕೀಲರ ಕಡೆಯಿಂದ ಕೇಳಿ ತಿಳಿದುಕೊಳ್ಳಿ. ನನ್ನ ವಾದ ಪತ್ರದಲ್ಲಿ ತಂದೆ ತಾಯಿ ಮನೆಯಿಂದ ಮತ್ತು ಗಂಡನ ದುಡಿಮೆಯಿಂದ ದಾವಾ ಸ್ವತ್ತನ್ನು ಕೊಂಡಿರುವ ಬಗ್ಗೆ ನಾನು ಬರೆಸಿಲ್ಲ. ನಾನು ತಂದೆ ತಾಯಿ ಮನೆಯಿಂದ ಮತ್ತು ಗಂಡನ

ದುಡಿಮೆಯಿಂದ ಯಶೋದಮ್ಮ ದಾವಾ ಸ್ವತ್ತನ್ನು ಕೊಂಡಿರುತ್ತಾರೆ ಎನ್ನುವುದನ್ನು ನನ್ನ ಕ್ರಯಪತ್ರ, ವಾದ ಪತ್ರದ ಮತ್ತು ಮುಖ್ಯ ವಿಚಾರಣೆ ಶಪಥ ಪತ್ರದಲ್ಲಿ ಹೇಳದೆ ಇದೇ ಮೊದಲ ಬಾರಿಗೆ ನನ್ನ ದಾವೆಯನ್ನು ಸುಧಾರಿಸಲು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

ಯಶೋದಮ್ಮ ಕೇವಲ ಗೃಹಿಣಿಯಾಗಿದ್ದು ಅವರಿಗೆ ಬೇರೆ ದುಡಿಮೆ ಇರಲಿಲ್ಲ ಎನ್ನುವುದು ಸರಿ ಇದೆ. ಯಶೋದಮ್ಮನ ಗಂಡ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಯಶೋದಮ್ಮ ಹೇಳಿದ್ದರು. ಯಶೋದಮ್ಮನ ಗಂಡನ ಕೆಲಸ ಯಾವುದು ಎಂದು ನಾನು ಕೇಳಿರುವುದಿಲ್ಲ. ಅಸಲು ದಾವೆ 491/2007 ರಲ್ಲಿ ನಾನು ನನ್ನ ಪರವಾಗಿ ಸಾಕ್ಷ್ಯ ನೀಡಿಲ್ಲ. ನನ್ನ ಪರವಾಗಿ ಬೇರೆಯವರಿಂದ ಸಾಕ್ಷ್ಯ ಮಾಡಿಸಿಲ್ಲ. ನಾನು ಸದ್ಭಾವನೆಯಿಂದ ಖರೀದಿ ಮಾಡಿರದ ಕ್ರಯದಾರ ಆಗಿದ್ದ ಕಾರಣ ಮತ್ತು ಅದನ್ನು ರುಜುವಾತು ಪಡಿಸಲು ಆಗದ ಕಾರಣ ಸದರಿ ದಾವೆಯಲ್ಲಿ ನನ್ನ ಪರವಾಗಿ ಸಾಕ್ಷ್ಯ ಕೊಟ್ಟಿಲ್ಲ ಎನ್ನುವುದು ಸರಿ ಅಲ್ಲ.

ದಾವಾ ಸ್ವತ್ತಿನಲ್ಲಿ ಯಾವುದೇ ಭಾಗ ಆಗದೆ ಇದ್ದರು ಮತ್ತು ದಾವಾ ಸ್ವತ್ತಿನ ಭಾಗ ಮಾರಾಟ ಮಾಡಲು ಯಶೋದಮ್ಮನಿಗೆ ಯಾವುದೇ ಹಕ್ಕು ಇರದೆ ಇದ್ದರು ಅವರಿಗೆ ಪುಸಲಾಯಿಸಿ ದುರುದ್ದೇಶದಿಂದ ಪೂರ್ಣ ಸ್ವತ್ತನ್ನು ಕಬಳಿಸಬೇಕು ಎಂದು ಕ್ರಯ ಪತ್ರ ಮಾಡಿಸಿಕೊಂಡಿದ್ದೇನೆ ಎನ್ನುವುದು ಸರಿ ಅಲ್ಲ. ಅಸಲು ದಾವೆ 491/2007 ಅಂತಿಮ ಹಂತ ಮುಟ್ಟಿರುತ್ತದೆ ಎನ್ನುವುದು ಸರಿ ಅಲ್ಲ. ಎಫ್ ಡಿ ಪಿ ಇದೆ. ಅಸಲು ದಾವೆ 491/2007 ರ ತೀರ್ಪು ಮತ್ತು ಡಿಕ್ರಿ

ಸರಿ ಇದೆ ಅಥವಾ ಇಲ್ಲ ಎಂದು ನನಗೆ ಹೇಳಲು ಆಗುವುದಿಲ್ಲ. ನನಗೆ ಇಂಗ್ಲೀಷ್ ಬರುವುದಿಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಶಪಥ ಪತ್ರದಲ್ಲಿ ಬರೆದಿರುವುದನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಶಪಥ ಪತ್ರದ ವಾಕ್ಯ ವೃಂದ-6 ರಲ್ಲಿ ಬರೆದಿರುವುದನ್ನು ಯಶೋದಮ್ಮ ಹೇಳಿದ್ದರ ಆಧಾರದ ಮೇಲೆ ಹೇಳುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಶಪಥ ಪತ್ರದ ವಾಕ್ಯ ವೃಂದ -6 ರಲ್ಲಿ ಬರೆದಿರುವುದನ್ನು ನಾನು ಅಸಲು ದಾವೆ 268/2007 ರ ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಕ್ರಯ ಪತ್ರದಲ್ಲಿ ಬರೆಸಿರುತ್ತೇನೆ ಅಥವಾ ಇಲ್ಲ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಯಶೋದಮ್ಮ ಹೇಳಿದ್ದು ಎಂದು ನನ್ನ ಮುಖ್ಯ ವಿಚಾರಣೆ ಶಪಥ ಪತ್ರದ ವಾಕ್ಯ ವೃಂದ -6 ರಲ್ಲಿ ಬರೆಸಲು ತೊಂದರೆ ಇತ್ತ ಎಂದರೆ ನೀವು ಹೇಳುತ್ತಿರುವುದು ಸುಳ್ಳು ಎಂದು ಉತ್ತರಿಸುತ್ತಿದ್ದಾರೆ.

ನನ್ನ ಮುಖ್ಯ ವಿಚಾರಣೆ ಶಪಥ ಪತ್ರದ ವಾಕ್ಯ ವೃಂದ -6 ರಲ್ಲಿ ಬರೆಸಿರುವುದೆಲ್ಲಾ ಸುಳ್ಳಾಗಿದ್ದು ಈಗ ನನ್ನ ಪ್ರಕರಣವನ್ನು ಸುಧಾರಿಸಲು ಮೊದಲ ಬಾರಿಗೆ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ನನ್ನ ಮುಖ್ಯ ವಿಚಾರಣೆ ಶಪಥ ಪತ್ರದ ವಾಕ್ಯ ವೃಂದ -6 ರಲ್ಲಿ ಹೇಳಿರುವುದನ್ನು ನಾನು ಹಿಂದಿನ ಸಿವಿಲ್ ವ್ಯವಹರಣೆಗಳಲ್ಲಿ ಮತ್ತು ಅವುಗಳಲ್ಲಿನ ಸಾಕ್ಷ್ಯದಲ್ಲಿ ಹೇಳಿಲ್ಲ ಎನ್ನುವುದು ಸರಿ ಅಲ್ಲ.

**ಮುಂದುವರೆದ ಪಾಟೀ ಸವಾಲು : ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.